**ಪ. ಗು. ಸಿದ್ದಾಪುರ**

ಪರಗೊಂಡ ಗುರುಪಾದಪ್ಪ ಸಿದ್ದಾಪುರ ಇವರ ಕಾವ್ಯನಾಮ ಪ.ಗು. ಸಿದ್ದಾಪುರ. ಇವರು ೦೧-೦೬-೧೯೫೪ರಲ್ಲಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯ ದಶಾಳ ಎಂಬ ಊರಿನಲ್ಲಿ ಜನಿಸಿದರು. ಇವರ ತಂದೆ ಹೆಸರು ಗುರುಪಾದಪ್ಪ. ತಾಯಿ ಹೆಸರು ಯಮುನಾ ಬಾಯಿ. ಇವರು ಎಂ. ಎ, ಎ.ಎಂ (ಆರ್ಟ ಮಾಸ್ಟರ್) ಪದವಿ ಪಡೆದಿದ್ದು, ಬಸವನ ಬಾಗೇವಾಡಿ ಮುಳವಾಡ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡದಲ್ಲಿ ನೂರಾರು ಮಕ್ಕಳ ಕವಿತೆಗಳು, ಕಥೆಗಳನ್ನು ರಚಿಸಿದ್ದಾರೆ. ಅನೇಕ ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ೨೦೧೦ರಲ್ಲಿ ಪಡೆದುಕೊಂಡಿರುವ ಇವರು ಅನೇಕ ಸಾಹಿತ್ಯ ಕೃತಿಗಳನ್ನು ನೀಡಿದ್ದಾರೆ. ಇವರ ಮಕ್ಕಳ ನೂರಾರು ಕವಿತೆಗಳು ಎಂಬ ಕೃತಿಯಿಂದ ಈ ಪದ್ಯವನ್ನು ಆರಿಸಿಕೊಳ್ಳಲಾಗಿದೆ.

FOR KANNADA